ವಂದೇ ಭಾರತ್ ಸೂಪರ್ ರೈಲಿನಲ್ಲಿ ಬೀಗರು ಬರುವವರಿದ್ದರು. ಹನ್ನೊಂದೂವರೆಗೆ ಹುಬ್ಬಳ್ಳಿ ಸ್ಟೇಷನ್ ಎಂದಿದ್ದರೂ ಅದಕ್ಕೂ ಮೊದಲೇ, ಕೆಲವೊಮ್ಮೆ ಹನ್ನೊಂದಕ್ಕೆಲ್ಲಾ ಹುಬ್ಬಳ್ಳಿ ತಲುಪಿದ ಅನುಭವವೂ ಇದ್ದದ್ದರಿಂದ ಬೀಗರು ಬರುವಷ್ಟರಲ್ಲಿ ಅಡುಗೆ ಕೆಲಸ ಮುಗಿಸಿ ಮನೆಯನ್ನು ಓರಣವಾಗಿಡುವ ತರಾತುರಿ ಲಲಿತೆಯದ್ದು. ಜೊತೆಗೆ ಮಾಸಲು ನೈಟಿ ಅವತಾರದಿಂದ ಸೀರೆಗೆ, ಏರಿಸಿ ಬಿಗಿದು ಕಟ್ಟಿದ್ದ ಗಂಟಿಂದ ನೀಟಾಗಿ ಬಾಚಿದ ಜುಟ್ಟಿಗೆ ಶಿಫ್ಟಾಗಿ, ಮುಖಕ್ಕೊಂದಷ್ಟು ಪೌಡರ್ ಬಳಿದು ರೆಡಿಯಿರಬೇಕೆಂಬ ಗಡಿಬಿಡಿಯೂ ಸೇರಿತ್ತು. ಅಷ್ಟಾದರೆ ಸತ್ಕಾರ, ಹರಟೆಯನ್ನು ನಿರಾತಂಕವಾಗಿ ಮಾಡಬಹುದೆಂದೇ ಬೆಳಗಿನ ತಿಂಡಿ ಬಿಸಿಬಿಸಿ ಬೇಳೆ ದೋಸೆ, ಕಾಯಿ ಚಟ್ನಿಯನ್ನು ಚಹಾದೊಟ್ಟಿಗೆ ಗಂಡ–ಮಗನಿಗೆ ಕೊಟ್ಟು ತಾನೂ ಅವಸರದಲ್ಲೇ ತಿಂದ ಶಾಸ್ತ್ರ ಮಾಡಿ ಮುಗಿಸಿದ್ದಳು.

ನೆಂಟರಿಷ್ಟರು ಬರುವವರಿದ್ದು, ವಿಶೇಷ ಅಡುಗೆ ಹಮ್ಮಿಕೊಂಡಾಗಲೇ ಕೈಕೊಡುವ ಕರೆಂಟನ್ನು ನೆಚ್ಚಿಕೊಳ್ಳುವಂತಿಲ್ಲವೆಂದೇ ಅವಸರದಲ್ಲಿ ರುಬ್ಬುವಂತಹ ಅಡುಗೆಯೆಡೆ ಗಮನಹರಿಸಿದ್ದಳು. ಕುಮಟಾ ತೆಂಗಿನಕಾಯಿ ಒಡೆದು ಆಗದಿದ್ದರೂ ಮೆಟ್ಟುಗತ್ತಿಯಲ್ಲಿ ಕಷ್ಟದಿಂದಲೇ ಕೂತು ಸರಸರನೆ ತುರಿದು ಹುಳಿಗೆಂದು ಹುರಿದ ಮಸಾಲೆಯೊಟ್ಟಿಗೆ ಎರಡು ಹಿಡಿಯಷ್ಟು ಬೆರೆಸಿ ಮಿಕ್ಸಿಯನ್ನು ಗಿರ್ರೆನ್ನಿಸಿದಳು. ಮಳೆಗಾಲವಾದ್ದರಿಂದ ತಂಬುಳಿಗೆಂದು ಹುರಿದ ದೊಡ್ಡಪತ್ರೆ, ಮೆಣಸು, ಜೀರಿಗೆಯನ್ನು ತೆಂಗಿನತುರಿಯೊಟ್ಟಿಗೆ ರುಬ್ಬಿ ಪಾತ್ರೆಯಲ್ಲಿ ತೆಗೆಯುತ್ತಿದ್ದಾಗ ಗೇಟು ಕಿರ್ರೆಂದಿತ್ತು! ಥಟ್ಟನೆ ಹಜಾರದ ಗಡಿಯಾರದೆಡೆ ದೃಷ್ಟಿ ಹಾಯಿಸಿದಳು, ಹತ್ತು ಗಂಟೆ ದಾಟಿತ್ತಷ್ಟೇ. ಅರ್ಧಕ್ಕರ್ಧ ಕೆಲಸವಿನ್ನೂ ಬಾಕಿಯಿದೆ, ಅವಸರದಲ್ಲಿದ್ದಾಗಲೇ ಯಾರಾದ್ರೂ ಬರೋದು ಈಗ್ಯಾರಪ್ಪಾ ಬಂದವ್ರು ಎಂದುಕೊಳ್ಳುತ್ತ ಮುಂಬಾಗಿಲಿಗೆ ಧಾವಿಸಿದಾಗ ಮಧ್ಯವಯಸ್ಸು ದಾಟಿದ ಹೆಂಗಸೊಬ್ಬಳು ಹಿಂಜರಿಯುತ್ತಾ ಒಳಬರುತ್ತಿದ್ದದ್ದು ಕಂಡು ಅಸಹನೆಯಿಂದ ಪ್ರಶ್ನಾರ್ಥಕವಾಗಿ ನೋಡಿದಳು.

‘ಲಲಿತಮ್ಮನವ್ರ ಮನೀನ ಹೌದಲ್ರೀ?’

‘ಹೌದ್ರೀ ನಾನೇ ಲಲಿತಮ್ಮ ಏನ್ ಹೇಳ್ರೀ’

ಬೀಗರ ಬರವಿನ ಗುಂಗಿನಲ್ಲಿದ್ದವಳಿಗೆ ಅಪರಿಚಿತ ಮಹಿಳೆಯನ್ನು ನೋಡುತ್ತಲೂ ಹುಬ್ಬು ಗಂಟಾಗಿತ್ತು, ಬಿಗಿದ ಮುಖದಿಂದಲೇ ಪ್ರಶ್ನೋತ್ತರಿಸಿದ್ದಳು.

‘ದಯಮಾಡಿ ಕ್ಷಮಾ ಮಾಡ್ರೀ ಬಾಯೀ, ಬೆಳಗಿನ್ ಕೆಲಸದ ಹೊತ್ತ್ಯಾಗ ನಿಮಗ ತೊಂದ್ರಿ ಕೊಡಾಕ್ಹತ್ತೀನ್ರೀ, ಅವ್ರು ನಿಮಗ ಭಾಳ್ ಪರಿಚಯ ಅದಾರಂತ್ರೀ, ನಿಮ್ಮನ್ನ ಭೇಟಿ ಆಗ್ಲಿಕ್ಕ ಆ ಅಕ್ಕಾರ ಹೇಳಿದ್ದರ್ರೀ, ದುಡದು ತಿನ್ನೋ ಮಂದೀಗ ನಕ್ಕೀ ಸಹಾಯ ಮಾಡ್ತಾರು. ಅದ್ರಲ್ಲೂ ವಿದ್ಯಾ ಕಲಿಯೂ ಮಕ್ಕ ಸಲುವಾಗಿ ಅಂತಂದ್ರ ಖಂಡಿತಾ ಇಲ್ಲನ್ನಂಗಿಲ್ಲ ಅಂತ್ಲೂ ಹೇಳಿದ್ದಕ್ಕ ನಿಮ್ಮನ್ನ ಹುಡುಕ್ಕೋತ ಬಂದೇನ್ರೀ’

ಸಂಕೋಚದಿಂದ ಮೈ ಹಿಡಿಯಾಗಿಸಿ ಹೇಳಲೋ ಬೇಡವೋ ಎಂಬಂತೆ ಅನುಮಾನಿಸುತ್ತಾ ಹೇಳಿದ ರೀತಿ ಅದೇಕೋ ಇವಳ ರಕ್ತದೊತ್ತಡವನ್ನು ರೊಯ್ಯನೆ ಏರಿಸಿತು! ಓಡುತ್ತಿರುವ ಸಮಯದ ಜೊತೆಗೆ ಆ ಹೆಂಗಸಿನ ಆಮೆಗತಿಯ ಪೀಠಿಕೆಯೂ ಸೇರಿ ಇವಳಲ್ಲಿದ್ದ ಸೌಜನ್ಯವನ್ನು ಮರೆಸಿ ಚಡಪಡಿಕೆಯ ಸ್ಥಿತಿಗೆ ಸಡ್ಡು ಹೊಡೆದಿತ್ತು.

‘ಅಲ್ಲವ್ವಾ ಅದೇನ್ ಹೇಳ್ಬೇಕಂಬೂದನ್ನ ಲಗೂ ಹೇಳಲ್ಲಾ? ಮೊದ್ಲ ನನಗ ಟೈಮಿಲ್ಲವ್ವಾ ಮಂದಿ ಬರೋವ್ರದಾರು. ಅಷ್ಟಕ್ಕೂ ನಮ್ಮನೀ ಅಡ್ರೆಸ್ಸು ಯಾರು ಕೊಟ್ರು? ನಮ್ಮ ಪರಿಚಯಸ್ಥರು ಅಂದ್ಯಲ್ಲವಾ ಅವ್ರ ಹೆಸ್ರು?’ ಏಕವಚನಕ್ಕಿಳಿದ ಇವಳದ್ದು ಏರುಧ್ವನಿಯ ತನಿಖೆ.

‘ಇದೊಂದ್ಸಲಾ ಕ್ಷಮಾ ಮಾಡ್ರೀ ಬಾಯೀ, ಅವ್ರ ಹೆಸ್ರು ನೆಪ್ಪಾಗವಲ್ತು, ಒಟ್ನಲ್ಲಿ ಬೆಳ್ಳಗ ಧಾಟ್ನೀಟದಾರು. ನಿಮ್ಹೆಸ್ರು, ಮನೀ ಗುರ್ತಾ ಯೆಲ್ಲಾ ಹೇಳಿದ್ರು ನೆಪ್ಪ ಹಾರೀನ್ರೀ, ಶಿಟ್ಟಿಗೇಳ್ಬೇಡ್ರವ್ವಾ ಕಷ್ಟಪಟ್ಟು ದುಡ್ದು ತಿಂತೇವಿ ಖರೇ ಮೋಸ ಮಾಡೂ ಮಂದಿ ಅಂತೂ ಅಲ್ರೀ.’

‘ಸರೀ ನಿನ್ಹೆಸರೇನವ್ವಾ?’

ಕೇಳುತ್ತಾ ಸೂಕ್ಷ್ಮವಾಗಿ ಗಮನಿಸಿದ್ದಳು. ಸ್ವಲ್ಪ ಹಳೆಯದಾದ ಹಸಿರಿನ ಇಳಕಲ್ಲು ಸೀರೆ, ತಲೆಯಿಂದ ಇಳಿ ಬಿದ್ದ ಸೆರಗಿನಲ್ಲಿ ಒಂದೆರಡು ತೇಪೆ ಹಚ್ಚಿದ್ದು ಕಂಡು ಒಂದುಕ್ಷಣ ಕನಿಕರವೆನ್ನಿಸಿತು. ಆದರೆ ಇಂದಿನ ಕಾಲಮಾನದಲ್ಲಿ ಯಾರನ್ನೂ ನಂಬುವಂತಿಲ್ಲ. ಬಡತನದ ಸೋಗಲ್ಲಿ ವಂಚಿಸುವವರೇ ಹೆಚ್ಚು; ನಿಜಕ್ಕೂ ಅವಶ್ಯಕತೆಯಿದ್ದವರಿಗೆ ಅದು ಲಭ್ಯವಾಗುವುದೇ ಇಲ್ಲ. ಸುಸ್ಥಿತಿಯಲ್ಲಿರುವ ಕೆಲವರು ಮೂರೂ ಬಿಟ್ಟವರಂತೆ ಬಿಪಿಎಲ್ ಕಾರ್ಡು ಬಳಸಿ ಸರಕಾರದ ಬಿಟ್ಟೀ ಸವಲತ್ತಿನ ದುರುಪಯೋಗ ಪಡೆಯುತ್ತಾರಲ್ಲಾ ಹಾಗೆಯೇ ಇದೂ ಸಹ ಮನದಲ್ಲಿ ಈ ವಿಚಾರ ಸುಳಿದದ್ದೇ ನೋಟವದು ತಂತಾನೇ ಪಕ್ಕದ ಮನೆಯತ್ತ ಹಾದಿತ್ತು. ಒಂದೂವರೆ ಗುಂಟೆಯಲ್ಲಿ ಚೆಂದದ ತಾರಸಿ ಮನೆ ಕಟ್ಟಿ ಹಿತ್ತಲಲ್ಲೊಂದು ಔಟ್‌ಹೌಸನ್ನೂ ಬಾಡಿಗೆಗೆ ಕೊಟ್ಟಿದ್ದರು. ಆತನಿಗೊಂದು ಬೈಕು, ಆಕೆಗೊಂದು ಸ್ಕೂಟಿಯೂ ಇದೆ. ಇತ್ತೀಚೆಗೆ ಏಸೀಯನ್ನೂ ಹಾಕಿಸಿರುವ ಅವರು ಬಳಸುವುದು ಮಾತ್ರ ಬಿಪಿಎಲ್ ಕಾರ್ಡು! ತಲೆಗೆ ಹತ್ತು ಕೇಜಿಯಂತೇ ಮುದಿ ಅತ್ತೆ, ಚಿಳ್ಳೆ ಮಿಳ್ಳೆಗಳ ಹೆಸರು ಸೇರಿಸಿ ಆರು ಜನರ ಅರವತ್ತು ಕೇಜಿ ಅಕ್ಕಿಯನ್ನು ತಾಸುಗಟ್ಟಲೆ ಕ್ಯೂನಲ್ಲಿ ನಿಂತಾದರೂ ಪುಕ್ಕಟ್ಟೆ ಸಂಪಾದಿಸಿ ಸಮೀಪದ ಖಾನಾವಳಿಗೆ ಮಾರುತ್ತಾರೆ, ತಾವು ಮಾತ್ರ ಕೇಜಿಗೆ ಅರವತ್ತರಂತೆ ಸೋನಾ ಮಸೂರಿ ಅಕ್ಕಿ ತಂದು ಉಣ್ಣುತ್ತಾರೆ ನಾಚಿಗ್ಗೇಡಿಗಳು! ಇದ್ದುಳ್ಳವರೂ ಸಹ ಬಿಪಿಎಲ್ ಕಾರ್ಡು ಬಳಸುತ್ತಿರುವುದನ್ನು ನೆನೆದಾಗಲೆಲ್ಲಾ ಲಲಿತೆಯ ಬಿಪಿ ಸರ್ರನೆ ಏರುತ್ತಿರುತ್ತದೆ. ಮೊದಲೆಲ್ಲಾ ಅನ್ಯಾಯದ ವಿರುದ್ಧ ಸಿಡಿಯುತ್ತಿದ್ದವಳು ಈಗ ಮಾಗಿದ ವಯದ ಕಾರಣ ಕಣ್ಣಿದ್ದೂ ಕುರುಡಿಯಂತಿರುವುದನ್ನು ರೂಢಿಸಿಕೊಂಡಿದ್ದಾಳೆ.

‘ಎಲ್ಲವ್ವ ರೀ ತಾರಿಹಾಳದಾಗ ಇರೂದ್ರೀ’

ಕೇಳದೆಯೇ ತಾನಿರುವ ಜಾಗವನ್ನೂ ತಿಳಿಸಿದಾಗ ಎತ್ತಣ ಮಾಮರ, ಎತ್ತಣ ಕೋಗಿಲೆಯಂತಾಗಿದ್ದ ವಿಚಾರಧಾರೆಯನ್ನು ಹತೋಟಿಗೆ ತಂದು ಪಕ್ಕದ ಮನೆಯವರ ಮೇಲಿನ ಸಿಟ್ಟನ್ನೂ ಸೇರಿಸಿ, ‘ಸರೀ, ಈಗ ನನ್ನಿಂದೇನಾಗ್ಬೇಕು ಅಂಬೂದನ್ನಾದ್ರೂ ಲಗೂನ ಹೇಳ್ತೀಯೇನೂ?’ ಒರಟಾಗಿಯೇ ಪ್ರಶ್ನಿಸಿದಳು.

‘ನಮ್ಮನೀಯವ್ರು ಅಲ್ಲೇ ಮನೀ ಹಂತ್ಯಾಕ ಕತ್ರೀಗ ಕುಂತು ಕಾಯಿಪಲ್ಲೇ ಯಾಪಾರ ಮಾಡ್ತಾರ್ರೀ. ದಿನದ ಖರ್ಚಿಗೂ ಸಾಲೂದಿಲ್ರೀ. ನಾನು ನಾಕ್ಮನೀ ಮುಸುರೀ ಕೆಲ್ಸ ಮಾಡ್ತೇನ್ರೀ. ಹೆಂಗೋ ಸುಸೂತ್ರ ನಡ್ದಿತ್ರೀ, ಆದ್ರೀಗ ನಮ್ಮಗಾ ಹತ್ನೆತ್ತೇದಾಗ ಭೋಲೋ ಮಾರ್ಕ್ಸ್ ತೊಗೊಂಡಾನ್ರೀ. ಡಿಪ್ಲೋಮಾ ಅಭ್ಯಾಸ ಮಾಡ್ತೀನಂತ ಹಟ ಹಿಡ್ದು ಕುಂತಾನ್ರೀ. ಎಂಬತ್ತು ಸಾವೀರ ಕಟ್ಬೋದನ್ನ ಅವ್ರಿವ್ರನ್ನ ಹಿಡ್ದು ಬೇಡ್ಕೊಂಡಿದ್ದಕ್ಕ ಐವತ್ತಕ್ಕ ಇಳಸ್ಯಾರ್ರೀ. ಅದಕ್ಕೂ ಸಂಘೀನ್ಯಾಗ ಸಾಲ ಮಾಡೇವ್ರೀ ಮತ್ತೂ ಸ್ವಲ್ಪ ಕಡಿಮ್ಬಿದ್ದಾವ್ರೀ ಅವ್ರೊಬ್ರ ಮನೀ ಅಡುಗೀ ಕೆಲ್ಸಕ್ಹೋದಾಗ ನಿಮ್ಮ ಗುರ್ತಿನವ್ರು ಸಿಕ್ಕಿದ್ದು ನೋಡ್ರೀ. ದಯಮಾಡಿ ಸಹಾಯ ಮಾಡಿ ಪುಣ್ಯಾ ಕಟ್ಗೋರೀ, ನಾವು ಸುಳ್ಹೇಳೂ ಮಂದಿ ಅಲ್ರೀ ಬಾಯೀ. ಮಗ ಕೆಲ್ಸಕ್ಕ ಸೇರಿದ್ಮ್ಯಾಲ ನಿಮ್ಮ ರೊಕ್ಕ ವಾಪಸ್ಸು ಮಾಡ್ತೇವ್ರೀ, ಋಣಾ ಇಟ್ಕೊಳ್ಳಂಗಿಲ್ರೀ ಬಾಯೀ.’

ಅದೇಕೋ ಅವಳ ಮಾತಿನಲ್ಲಿ ಧೋರಣೆಯಿದ್ದಂತೆನ್ನಿಸಿತ್ತು, ಅಲ್ಲದೆ ಅವಳನ್ನು ನಂಬುವುದಾದರೂ ಹೇಗೆ? ಇತ್ತೀಚೆಗಷ್ಟೇ ಹುಡುಗನೊಬ್ಬನಿಂದ ಮೋಸ ಹೋದದ್ದಾಗಿದೆ. ಎರಡನೇ ಪಿಯುಸಿಯಲ್ಲಿ ಓದುತ್ತಿರುವುದಾಗಿಯೂ ಟ್ಯೂಷನ್ನಿಗೆಂದು ಧನಸಹಾಯ ಬೇಡಿದ್ದ. ಸಂಜೆಯ ಬಿಡುವಿನ ಸಮಯದಲ್ಲಿ ಸುಪ್ರಸಿದ್ಧ ಮಳಿಗೆಯಲ್ಲಿ ಮೂರು ತಾಸು ದುಡಿದು ಖರ್ಚು ನಿಭಾಯಿಸುತ್ತಿದ್ದವನಿಗೆ ಟ್ಯೂಷನ್ನಿನ ಹಣ ಕಟ್ಟಲು ಐದು ಸಾವಿರ ಕಡಿಮೆ ಬಿದ್ದದ್ದಕ್ಕೆ ದಾನಿಯೊಬ್ಬರಿಂದ ಮೂರು ಸಾವಿರ ಪಡೆದದ್ದಾಗಿದೆ, ಎರಡು ಸಾವಿರ ಮಾತ್ರ ಬೇಕಿದೆಯೆಂದು ಬೇಡಿಕೊಂಡಾಗ ಹೆಚ್ಚು ಪ್ರಶ್ನಿಸದೆ ಕೊಟ್ಟು ಕಳಿಸಿದ್ದಳು. ನಂತರದಲ್ಲಿ ಆ ಸುಪ್ರಸಿದ್ಧ ಮಳಿಗೆಗೆ ಹೋದಾಗ ಆತನ ನೆನಪಾಗಿ ವಿಚಾರಿಸಿದಾಗಲೇ ಸುಳ್ಳು ಹೇಳಿದ್ದು ಗೊತ್ತಾಗಿತ್ತು. ಆದರೂ ಅವ ಹೇಳಿದ ವಿದ್ಯಾಸಂಸ್ಥೆಯಲ್ಲಿಯೂ ಕ್ರಾಸ್‌ಚೆಕ್ ಮಾಡಿ ಮೋಸ ಹೋದದ್ದನ್ನು ಖಾತ್ರಿಪಡಿಸಿಕೊಂಡಿದ್ದಳು. ಮನೆಯವರಲ್ಲಿ ಹೇಳಿದರೆ ಸಾಂತ್ವನದ ಬದಲು ಲೇವಡಿಯೇ ಸಿಗುವುದೆಂಬುದು ಗೊತ್ತಿದ್ದೇ ಹೇಳಿರಲಿಲ್ಲ. ಇದೀಗ ಈ ಹೆಂಗಸು ತನ್ನ ಸ್ವಭಾವವನ್ನು ತಿಳಿದು ದುರುಪಯೋಗಪಡಿಸಿಕೊಳ್ಳಲು ಬಂದದ್ದೇ ಹೌದು, ಇಲ್ಲದಿದ್ದಲ್ಲಿ ಕಳಿಸಿದ ಪರಿಚಯಸ್ಥರ ಹೆಸರನ್ನು ಖಂಡಿತಾ ಹೇಳುತ್ತಿದ್ದಳು. ಅಷ್ಟುದ್ದದ ವಿಳಾಸ ನೆನಪಿಟ್ಟುಕೊಂಡವಳಿಗೆ ಹೆಸರು ನೆನಪಿಟ್ಟುಕೊಳ್ಳುವುದು ಕಷ್ಟವೇ? ಇನ್ನೂ ಇಂಥವರನ್ನೆಲ್ಲಾ ನಂಬಿದರೆ ದಡ್ಡತನವಾದೀತು.

‘ನೋಡವ್ವಾ ನನ್ನ ವಿಳಾಸ ನೆನಪೈತಿ, ಆದ್ರ ಅವ್ರ ಹೆಸ್ರು ನೆನಪಿಲ್ಲಂದ್ರ ನಂಬೂ ಮಾತೇನೂ? ಅಷ್ಟಕ್ಕೂ ನಂಗೀಗ ಪುರುಸೊತ್ತಿಲ್ಲ, ಮತ್ತೊಮ್ಮೆ ನೋಡೂಣಂತ’ ಎಂದು ಹೇಳಿ ಒಳಬಂದವಳು